# ಷರತ್ತುಗಳು

1. ಹಂಚಿಕೆಗಳು:- ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆಯನ್ನು 1989ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರಿಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳ ಅನುಸಾರ ಮಾಡಲಾಗುವುದು.

2. **ನೋಂದಣಿ**:-

ಎ) ನಾಗರಿಕ ಸೌಲಭ್ಯದ ನಿವೇಶನಕ್ಕೆ ಅರ್ಜಿ ಸಲ್ಲಿಸಲು ಅಪೇಕ್ಷೆ ಹೊಂದಿರುವ ಸಂಸ್ಥೆಗಳು ಕೆನರಾ ಬ್ಯಾಂಕ್, ಬಿಡಿಎ ಎಕ್ಸ್‌ಟೇನ್‌ಷನ್ ಕೌಂಟರ್‌ನಲ್ಲಿ ನಿಗದಿತ ನೋಂದಣಿ ಶುಲ್ಕ ಪಾವತಿ ಮಾಡಿ ಬಿಡಿಎನಲ್ಲಿ ನೋಂದಣಿ ಮಾಡಿಸಬೇಕು ದಿನಾಂಕ: 07.05.2022 ರಿಂದ ಕೆನರಾಬ್ಯಾಂಕ್, ಬಿಡಿಎ ಎಕ್ಸ್‌ಟೆನ್‌ಷನ್ ಕೌಂಟರ್‌ನಲ್ಲಿ ಸಿ.ಎ.ನಿವೇಶನಗಳ ಹಂಚಿಕೆಗೆ ಅರ್ಜಿ ಪಡೆಯಬಹುದಾಗಿದೆ. ಸಂಬಂಧಪಟ್ಟ ಸಿ.ಎ. ನಿವೇಶನಗಳ ಬಗ್ಗೆ ನೋಂದಣಿ ಶುಲ್ಕವನ್ನು ಕಾಲಂ 8ರಲ್ಲಿ ತಿಳಿಸಲಾಗಿದೆ.

ಬಿ) ಒಂದಕ್ಕಿಂತ ಹೆಚ್ಚು ನಿವೇಶನಕ್ಕೆ ಅರ್ಜಿ ಸಲ್ಲಿಸಲು ಯಾವುದೇ ಸಂಸ್ಥೆಯು ಬಯಸಿದಲ್ಲಿ ಪ್ರತಿ ನಿವೇಶನಕ್ಕೆ ಪ್ರತ್ಯೇಕವಾಗಿ ನೋಂದಣಿ ಮಾಡಬೇಕು.

ಸಿ) ಯಾವುದೇ ಸಂಸ್ಥೆಯು ನೋಂದಣಿ ಶುಲ್ಕವನ್ನು ಹಿಂತೆಗೆದುಕೊಳ್ಳಲು ಬಯಸಿದರೆ, ನೋಂದಣಿಯ ಪೂರ್ಣ ಹಣದಲ್ಲಿ ಸೇವಾ ವೆಚ್ಚಗಳ ಬಗೆಗೆ ನೋಂದಣಿ ಶುಲ್ಕದ 10% ಹಣವನ್ನು ಕಡಿತಗೊಳಿಸಿ ಸಂಬಂಧಪಟ್ಟ ಸಂಸ್ಥೆಗೆ ಪ್ರಾಧಿಕಾರವು ಮರುಪಾವತಿ ಮಾಡುವುದು.

ಡಿ) ಸಂಸ್ಥೆಯು ಒಮ್ಮೆ ನೋಂದಣಿ ಮಾಡಿ ಅದನ್ನು ಹಿಂತೆಗೆದುಕೊಳ್ಳದಿದ್ದರೆ ಸದರಿ ನೋಂದಣಿಯು ಮುಂದಿನ ಹಂಚಿಕೆಗೂ ಸಿಂಧುವಾಗಿರುತ್ತದೆ.

ಇ) ಸಂಸ್ಥೆಗೆ ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ಆದ ಪಕ್ಷದಲ್ಲಿ ಅವರು ಪಾವತಿ ಮಾಡಿದ್ದ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡುವುದಿಲ್ಲ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

**ಎಫ್) ನೋಂದಣಿ ಶುಲ್ಕವನ್ನು ನಗದಾಗಿ /ಡಿಡಿ ರೂಪದಲ್ಲಿ ಮಾತ್ರ ಸಂದಾಯ ಮಾಡಬೇಕು**.

3. **ಅರ್ಹತೆ**:-

ಎ) ಸದರಿ ನಿಯಮಗಳ ನಿಯಮ-5ರ ಅನ್ವಯ ನೋಂದಣಿ ಮಾಡಿಸಿರುವ ಸಂಸ್ಥೆಗೆ ಮಾತ್ರ ಪ್ರಾಧಿಕಾರವು ನಾಗರಿಕ ಸೌಲಭ್ಯದ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವುದು.

ಬಿ) ಸಂಸ್ಥೆ ಅಂದರೆ, 1960 ರ ಕರ್ನಾಟಕ ಸಂಸ್ಥೆಗಳ ನೋಂದಣಿ ಅಧಿನಿಯಮದ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ ಸೊಸೈಟಿ ಅಥವಾ ಸಂಘ ಅಥವಾ 1960ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಅನ್ವಯ ನೋಂದಣಿಯಾಗಿರುವ ಸಹಕಾರಿ ಸಂಘ ಅಥವಾ ಧರ್ಮಾರ್ಥ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಸಂಪೂರ್ಣವಾಗಿ ರಚನೆಯಾಗಿರುವ ಒಂದು ಟ್ರಸ್ಟ್ ಎಂದು ಅರ್ಥ.

4. **ಗುತ್ತಿಗೆ ಮೊಬಲಗು ಮತ್ತು ಸಂಸ್ಥೆಗೆ ನಿವೇಶನದ ಹಂಚಿಕೆ**:-

ಎ) ನಾಗರಿಕ ಸೌಲಭ್ಯದ ನಿವೇಶನವನ್ನು 30 ವರ್ಷಗಳಿಗೆ ಮೀರದಂತೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

ಬಿ) ಯಾವುದೇ ಪ್ರದೇಶದಲ್ಲಿ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವ ನಿವೇಶನದ ಗುತ್ತಿಗೆ ಮೊಬಲಗನ್ನು ನಿವೇಶನದ ಸರಿಯಾದ ಅಳತೆಯ ಆಧಾರದ ಮೇಲೆ ಪ್ರಾಧಿಕಾರವು ನಿಗದಿಗೊಳಿಸುವುದು. ಸೂಚಿಸಿರುವ ನಿವೇಶನಗಳ ವಿಸ್ತೀರ್ಣವು ವ್ಯತ್ಯಾಸವಾಗುವುದಕ್ಕೆ ಒಳಪಟ್ಟಿರುತ್ತದೆ.

ಸಿ) ಗುತ್ತಿಗೆ ಮೊಬಲಗನ್ನು ಒಟ್ಟಿಗೆ ಪಾವತಿ ಮಾಡಬಹುದು ಅಥವಾ ಗುತ್ತಿಗೆಯ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡಬಹುದು. ಗುತ್ತಿಗೆ ಮೊಬಲಗನ್ನು ಒಟ್ಟಿಗೆ ಪಾವತಿ ಮಾಡುವುದಾದರೆ ಗುತ್ತಿಗೆದಾರನು ಪ್ರತಿ ವರ್ಷಕ್ಕೆ 10 ಚದರ ಮೀಟರ್ ಒಂದಕ್ಕೆ ರೂ.1/- ರಂತೆ ಹೆಚ್ಚುವರಿ ಗುತ್ತಿಗೆ ಮೊಬಲಗನ್ನು ಸಹ ಪಾವತಿ ಮಾಡಬೇಕಾಗುವುದು.

ಡಿ) ಅರ್ಜಿ ಆಹ್ವಾನಿಸುವಾಗ ಪ್ರಕಟಿಸಿರುವ ನಿವೇಶನದ ಗುತ್ತಿಗೆ ಮೊಬಲಗನ್ನು ಪ್ರಾಧಿಕಾರ ಬದಲಾವಣೆ ಮಾಡಬಹುದಾಗಿರುತ್ತದೆ. ಸಂಸ್ಥೆಯು, ಬದಲಾವಣೆ ಮಾಡಿದ ದರಗಳಲ್ಲಿ ನಿವೇಶನ ಪಡೆಯಲು ಒಪ್ಪಬಹುದು ಅಥವಾ ಹಂಚಿಕೆಯನ್ನು ನಿರಾಕರಿಸಬಹುದಾಗಿರುತ್ತದೆ.

5. **ಅರ್ಜಿ**:-

ಎ) ಅರ್ಜಿ ನಮೂನೆಯ ಬೆಲೆ ರೂ.1000/- ಪಾವತಿ ಮಾಡಿ ನಿಗದಿತ ಅರ್ಜಿಯನ್ನು ಕೆನರಾ ಬ್ಯಾಂಕ್, ಬಿಡಿಎ ಎಕ್ಸ್‌ಟೆನ್‌ಷನ್ ಕೌಂಟರ್‌ನಲ್ಲಿ ಪಡೆದುಕೊಳ್ಳಬಹುದು.

ಬಿ) ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆ ಪಡೆಯಲು ಬೆಂ.ಅ.ಪ್ರಾ., ದಲ್ಲಿ ನೋಂದಣಿ ಮಾಡಿಸಿರುವ ಸಂಸ್ಥೆಗಳು ಕಾಲಂ 8 ರಲ್ಲಿ ತಿಳಿಸಿರುವಂತೆ, ನಿಗದಿತ ಅರ್ಜಿ ನಮೂನೆ II ರ ಜೊತೆಗೆ ನಿವೇಶನಕ್ಕೆ ಪ್ರಕಟಿಸಿರುವ ಗುತ್ತಿಗೆ ಮೊಬಲಗಿನ ಶೇಕಡ 10 ರಷ್ಟು ಪ್ರಾರಂಭಿಕ ಠೇವಣಿಯನ್ನು ಸಲ್ಲಿಸಬೇಕು.

ಸಿ) ಅರ್ಜಿಯನ್ನು ದಿನಾಂಕ: 06.06.2022 ಮಧ್ಯಾಹ್ನ 3.30 ಗಂಟೆ ಅಥವಾ ಅದಕ್ಕಿಂತ ಮುಂಚಿತವಾಗಿ ವೈಯಕ್ತಿಕವಾಗಿ ಬಿಡಿಎಯಲ್ಲಿ ಇರುವ ಕೆನರಾ ಬ್ಯಾಂಕ್ ನಗದು ಕೌಂಟರಿನ ಮೂಲಕ ಬಿಡಿಎ ಆಯುಕ್ತರ ಕಛೇರಿಗೆ ತಲುಪುವಂತೆ ಖುದ್ದಾಗಿ ಸಲ್ಲಿಸಬಹುದು ಅಥವಾ ನೋಂದಣಿ ಅಂಚೆ ಮೂಲಕ ಕಳುಹಿಸಬಹುದು. ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ಬರುವ ಮತ್ತು ದೋಷಯುಕ್ತವಾದ ಮತ್ತು ಸರಿಯಾಗಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಡಿ) ಅರ್ಜಿದಾರರು ಅರ್ಜಿಯ ಜೊತೆಗೆ ಕಳೆದ ಐದು ವರ್ಷಗಳ ವಾರ್ಷಿಕ ಮತ್ತು ಲೆಕ್ಕಪರಿಶೋಧಕರ ವರದಿ ಹಾಗೂ ಹಂಚಿಕೆ ಇತ್ಯಾದಿ ಪಡೆಯಲು ಸಂಸ್ಥೆ / ಟ್ರಸ್ಟ್ ಹೊರಡಿಸಿರುವ ನಿರ್ಣಯವನ್ನು ಲಗತ್ತಿಸಿ ಸಲ್ಲಿಸಬೇಕು.

6. **ಹಂಚಿಕೆ ಬಗೆಗಿನ ಷರತ್ತುಗಳು**:-

ಎ) ನಾಗರಿಕ ಸೌಲಭ್ಯದ ನಿವೇಶನ ಹಂಚಿಕೆಯ ಬಗೆಗಿನ ಷರತ್ತುಗಳನ್ನು ಅರ್ಜಿ ನಮೂನೆಯ ಜೊತೆಯಲ್ಲಿ ಕೊಡಲಾಗುವುದು.

ಬಿ) ಯಾವುದೇ ನಿರ್ದಿಷ್ಟವಾದ ಸಿ.ಎ. ನಿವೇಶನದ ಹಂಚಿಕೆ ಪಡೆಯಲು ಸಾರ್ವಜನಿಕರಿಂದ ಸಾಕಷ್ಟು ಕೋರಿಕೆ ಬರದಿದ್ದ ಪಕ್ಷದಲ್ಲಿ ಪ್ರಾಧಿಕಾರವು ಸಮಗ್ರ ಅಭಿವೃದ್ಧಿ ಯೋಜನೆಯ ಅನುಸಾರವಾಗಿ ಅಂತಹ ಸಿ.ಎ. ನಿವೇಶನಗಳ ಉದ್ದೇಶವನ್ನು ಬದಲಾವಣೆ ಮಾಡಿ ಅವುಗಳ ಹಂಚಿಕೆಗಾಗಿ ಮರು ಪ್ರಕಟಣೆ ಮಾಡಬಹುದಾಗಿರುತ್ತದೆ.

ಸಿ) ಹಂಚಿಕೆಯ ಸಂಬಂಧ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ನಿವೇಶನಕ್ಕಾಗಿ ಸಲ್ಲಿಸಲಾಗಿರುವ ಯಾವುದೇ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರವು ಕಾದಿರಿಸಿಕೊಂಡಿದೆ.

7. ಅರ್ಜಿದಾರರು ತಾವು ಸಲ್ಲಿಸುವ ಅರ್ಜಿಯ ಜೊತೆಗೆ ಸಿ.ಐ.ಟಿ.ಬಿ./ಬಿ.ಡಿ.ಎ. ಯಿಂದ ಅವರಿಗೆ ಈ ಹಿಂದೆ ಹಂಚಿಕೆ ಮಾಡಲಾಗಿದ್ದ ಸಿ.ಎ. ನಿವೇಶನದ ವಿವರಗಳನ್ನು ಸಲ್ಲಿಸಬೇಕು.

**8. ಹಂಚಿಕೆಗಾಗಿ ಪ್ರಸ್ತಾಪಿಸಿರುವ ಸಿ.ಎ. ನಿವೇಶನಗಳ ಸಂಬಂಧ ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಾರ್ವಜನಿಕರು/ಹಿತಾಸಕ್ತಿದಾರರು ತಮ್ಮ ಆಕ್ಷೇಪಣೆಯನ್ನು ಪೂರಕ ದಾಖಲೆಗಳೊಂದಿಗೆ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಸಲ್ಲಿಸಬಹುದಾಗಿದೆ ಅಂತಹ ಆಕ್ಷೇಪಣೆಗಳ ಸಂಬಂಧ ಪ್ರಾಧಿಕಾರದ ನಿರ್ಣಯವು ಅಂತಿಮವಾಗಿರುತ್ತದೆ.**

9. ಯಾವುದೇ ಸಿ.ಎ ನಿವೇಶನದ ಸಂಬಂಧ ಯಾವುದೇ ರೀತಿಯ ಜಟಿಲ ಸಮಸ್ಯೆಗಳು/ಕಾನೂನಾತ್ಮಕ ನಿರ್ಬಂಧಗಳು ಕಂಡುಬಂದಲ್ಲಿ ಅಂತಹ ಸಿ.ಎ ನಿವೇಶನವನ್ನು ಯಾವುದೇ ಮುನ್ಸೂಚನೆಯನ್ನು ನೀಡದೆ ಹಂಚಿಕೆ ಪ್ರಕ್ರಿಯೆಯಿಂದ ಹಿಂಪಡೆಯಲಾಗುವುದು:

10. ಹಂಚಿಯಿಂದ ಹಿಂಪಡೆಯಲಾದ ಸಿ.ಎ ನಿವೇಶನದ ಸಂಬಂಧ ಸಂಸ್ಥೆಯು ಪಾವತಿಸಿದ ಆರಂಭಿಕ ಠೇವಣಿಯನ್ನು ಹಿಂದಿರುಗಿಸಲಾಗುವುದು. ಯಾವುದೇ ಬಡ್ಡಿಯನ್ನು ಪ್ರಾಧಿಕಾರದ ವತಿಯಿಂದ ನೀಡಲಾಗುವುದಿಲ್ಲ:

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06.06.2022**

**ಸಹಿ/- ಆಯುಕ್ತರು, ಬೆಂಅಪ್ರಾ, ಬೆಂಗಳೂರು**

**ಬಿಡಿಎ ಮುಂದಾಳತ್ವದಲ್ಲಿ ಬೆಂಗಳೂರು ಅಭಿವೃದ್ಧಿ ಪಥದಲ್ಲಿ**

## CONDITIONS

1. **Allotments:-** The Allotment of CA site will be in accordance with the Bangalore Development Authority (Allotment of Civic Amenity Site) Rules, 1989.
2. **Registration :-** a) The institution which desires to apply for the C.A.site should register with BDA by paying the prescribed registration fee at Canara Bank, BDA Head Office; application will be issued on 07.05.2022 at the said Bank. The registration fee for the respective C.A.Site is given in column-8. b) If any institution desires to apply for more than one C.A.site, it should register separately for each site. c) If any institution desires to withdraw the registration fee, the Authority shall refund to such institution the entire registration fee paid by the institution after deducting 10% of the registration fee towards service charges. d) The registration once made shall be valid for subsequent allotments unless the institution withdraws the registration. e) The registration fee paid shall not be refunded or adjusted if a civic amenity site is allotted to the institution. f) The registration fee shall be paid in Cash/ by DD only.
3. **Eligibility :-** a) The Authority will allot the C.A.Site on lease basis only to an institution which is registered under Rule-5 of the said rules. b) Institution means an institution, Society or an association registered under the Karnataka Society Registration Act,1960, or a Co-operative Society registered under the Co-operative Societies Act, 1960, or a Trust created wholly for Charitable, Educational or Religious purposes.
4. **Lease amount and site allotment to institution:-** a) The allotment of Civic Amenity site shall be only on lease basis for a period not exceeding 30 years. b) The lease amount of the site to be allotted on lease basis in any area shall be fixed by the Authority based on the correct dimension of the site. The area of the site indicated is subject to variation. c) The lease amount may be paid in one lump sum or in annual installments during the lease period. If paid in lump sum, the lessee also has to pay additional lease amount at Rs.1/- per 10 sqm. each year. d) The lease amount of the site notified while inviting applications may be altered by the Authority, and institution may accept the site at altered rates or decline allotment.
5. **Application:-** a) The prescribed application can be obtained from Canara Bank, BDA Head Office, after payment of Rs. 1000/- towards cost of application form. b) Institution registered with BDA may only apply in the prescribed form-II for allotment of CA site along with the initial deposit, which is given in column 8 and which will be 10% of the notified lease amount of the site. c) The application shall be presented in person or sent by Registered Post so as to reach the office of the Commissioner, BDA, through Canara Bank cash counter at BDA until 3.30 PM on or before 06.06.2022. The applications which are received after the due date and which are defective and incorrect are liable to be rejected. d) The applicant shall submit the Annual Report and Audit Report for the last five years and Resolution of the institution/Trust seeking allotment, etc. along with the application.
6. **Conditions of Allotment:-** a) The conditions of the allotment of the CA site are given along with the application form. b) In case there is no adequate response from the public for the allotment of any particular CA site, the Authority can change the purpose of such CA site in conformity with the Comprehensive Development Plan and re-notify the same for allotment. c) The decision of the Authority regarding allotment shall be final. The Authority reserves the right to accept or reject any or all the applications received for any of the sites.
7. The applicant should submit the particulars of CA Site allotted to them previously by CITB/BDA along with the application.
8. **ANY OBJECTIONS TO THE PROPOSED PURPOSE OF ALLOTMENT OR OTHERWISE SHALL BE INFORMED TO THE COMMISSIONER, BANGALORE DEVELOPMENT AUTHORITY, BENGALURU, WITHIN LAST DATE OF FIXED FOR SUBMISSION OF APPLICATION. THE DECISION OF THE AUTHORITY ON SUCH OBJECTIONS SHALL BE FINAL.**
9. In case C.A. Site is withdrawn, the initial deposit will be returned to the Institution No interest will be paid by the Authority.
10. If any C.A. Site is found to have complex problems/legal restrictions. then that C.A. Site will be withdrawn from the allotment process without giving any advance notice.

**Last date to submit application: 06.06.2022**

**Sd/- Commissioner, BDA, Bengaluru**

**Wherever BDA Goes - Bengaluru Grows**